ಹೃದಯ ಸಂಬಂಧಿ ಆಸ್ಪತ್ರೆಗಳು

3293 (3692); ಶ್ರೀ ನಾರಾಯಣಸ್ವಾಮಿ ಎಸ್.ಎನ್ (ಬಂಗಾರಪೇಟೆ)

ಅ) ಹೃದಯ ಸಂಬಂಧಿ ಕಾಯಿಲೆಗಳಿಗೆ ಚಿಕಿತ್ಸೆ ನೀಡುವಂತೆ ಜಯದೇವ ಹೃದ್ರೋಗ ಸಂಸ್ಥೆ ಮಾದರಿಯ ಎಷ್ಟು ಆಸ್ಪತ್ರೆಗಳು ರಾಜ್ಯದಲ್ಲಿದೆ;

ಆ) ರಾಜ್ಯದ ಮೂಲೆ ಮೂಲೆಗಳಿಂದ ಹೃದಯ ಸಂಬಂಧಿ ಚಿಕಿತ್ಸೆಗಾಗಿ ಬೆಂಗಳೂರಿನ ಜಯದೇವ ಹೃದ್ರೋಗ ಸಂಸ್ಥೆಗೆ ಬರಬೇಕಾಗಿದ್ದು ಇದರಿಂದ ತುಂಬ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಜಯದೇವ ಸಂಸ್ಥೆ ಮಾದರಿಯ ಆಸ್ಪತ್ರೆಗಳನ್ನು ವಿಭಾಗ ಮಟ್ಟಗಳಲ್ಲಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಕೈಗೊಂಡಲ್ಲಿ ಎಷ್ಟು ದಿವಸಗಳಲ್ಲಿ ಪ್ರಾರಂಭಿಸಲಾಗುವುದು?

ಡಾ॥ ಶರಣಪ್ರಕಾಶ ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಬೆಂಗಳೂರಿನ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆಯು ಹೃದ್ರೋಗಿಗಳಿಗೆ ಅಗತ್ಯವಿರುವ ಚಿಕಿತ್ಸೆ ನೀಡುತ್ತಿದ್ದು, ಈ ಸಂಸ್ಥೆಯ ಶಾಖೆಯು ಬೆಂಗಳೂರಿನ ಪಶ್ಚಿಮ ಭಾಗದ ರಾಜಾಜಿನಗರದ ಇ.ಎಸ್.ಐ.ಸಿ.ಎಂ.ಹೆಚ್.ನಲ್ಲಿ ಮತ್ತು ಮೈಸೂರಿನ ಕೆ.ಆರ್. ಆಸ್ಪತ್ರೆಯ ಆವರಣದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿವೆ.

ಆ) ರಾಜ್ಯದ ಮೂಲೆ ಮೂಲೆಗಳಿಂದ ಹೃದಯ ಸಂಬಂಧಿ ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಯಶಸ್ವಿನಿ ಹಾಗೂ ವಾಜಪೇಯಿ ಆರೋಗ್ಯಶ್ರೀ ಫಲಾನುಭವಿಗಳಿಗೆ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳು ನೆಟ್‌ವರ್ಕ್ ಆಸ್ಪತ್ರೆಯಾಗಿ ನೋಂದಾಯಿಸಿಕೊಂಡಿರುತ್ತದೆ. ಆದ್ದರಿಂದ, ಈ ಯೋಜನೆಯಡಿಯಲ್ಲಿ

ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ ಅಷ್ಟೇ ಅಲ್ಲದೆ ಖಾಸಗಿ ಆಸ್ಪತ್ರೆಗಳಲ್ಲಿಯೂ ರೋಗಿಗಳಿಗೆ ಎಲ್ಲಾ ರೀತಿಯ ಚಿಕಿತ್ಸಾ ಸೌಲಭ್ಯ ದೊರೆಯುತ್ತಿದೆ. ಆ ಭಾಗದಲ್ಲಿರುವ ಜನ ಸಾಮಾನ್ಯರಿಗೆ ಚಿಕಿತ್ಸೆ ಪಡೆಯಲು ಯಾವುದೇ ತೊಂದರೆಯಾಗುತ್ತಿಲ್ಲ.

ಇ) 2015–16 ನೇ ಸಾಲಿನ ಆಯವ್ಯಯ ಘೋಷಣೆಯಂತೆ ಗುಲ್ಬರ್ಗಾದಲ್ಲಿ ₹. 15.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಹೃದ್ರೋಗ ಚಿಕಿತ್ಸಾ ಘಟಕವನ್ನು ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿದ್ದು, ಈ ಘಟಕವನ್ನು ಅಗತ್ಯ ಮೂಲಸೌಲಭ್ಯಗಳೊಂದಿಗೆ ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ.

ನೊರೆ ಮತ್ತು ಕಲಬೆರಕೆ ಪೆಟ್ರೋಲ್, ಡೀಸಲ್

3294 (3693); ಶ್ರೀ ನಾರಾಯಣಸ್ವಾಮಿ ಎಸ್.ಎನ್ (ಬಂಗಾರಪೇಟೆ)

ಅ) ರಾಜ್ಯದಲ್ಲಿ ವ್ಯಾಪಾರಿಗಳು ನಿಗಧಿತ ಬೆಲೆಗಿಂತ (ಎಂ.ಆರ್.ಪಿ) ಹೆಚ್ಚಿನ ದರಕ್ಕೆ ಸರಕುಗಳನ್ನು ಕಡಿಮೆ ತೂಕದ ಸರಕುಗಳನ್ನು ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವ್ಯಾಪಾರಿಗಳು ಬಳಸುವ ತಕ್ಕಡಿಗಳು ಮತ್ತು ಅಳತೆ ಮಾಪನ ಮಾಡುವ ಬಟ್ಟುಗಳು, ಲೀಟರ್‌ಗಳು ಮುಂತಾದವುಗಳನ್ನು ಇಲಾಖೆಯವರು ದಾಳಿ ಮಾಡಿ ಪರೀಕ್ಷಿಸಿದ್ದಾರೆಯೇ; ಎಷ್ಟು ದಾಳಿಗಳನ್ನು ಮಾಡಲಾಗಿದೆ (ವಿವರ ನೀಡುವುದು);

ಇ) ಪೆಟ್ರೋಲ್ ಬಂಕ್‌ಗಳಲ್ಲಿ ಅಳತೆಗಿಂತ ಕಡಿಮೆ ಮತ್ತು ಕಲಬೆರಕೆಯ ಪೆಟ್ರೋಲ್ ಮತ್ತು ಡೀಸೆಲ್ ಹಾಕುತ್ತಿರುವುದನ್ನು ಸರ್ಕಾರ ಪರೀಕ್ಷಿಸುತ್ತಿದೆಯೆ; ಎಷ್ಟು ಪ್ರಕರಣಗಳಲ್ಲಿ ತನಿಖೆ ಮಾಡಿ ಕೇಸುಗಳನ್ನು ದಾಖಲು ಮಾಡಲಾಗಿದೆ; ಸರ್ಕಾರ ಅಂತವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ.